**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 1331 |
| **ಸದಸ್ಯರ ಹೆಸರು** | : | ಶ್ರೀ ಎಸ್.ವ್ಹಿ.ಸಂಕನೂರ<br>(ಪದವೀಧರರ ಕ್ಷೇತ್ರ) |
| **ಉತ್ತರಿಸುವ ದಿನಾಂಕ** | : | 21.03.2025 |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಾರವಾರ ಜಿಲ್ಲೆಯ ಸಮುದ್ರ ದಂಡೆಯ ವ್ಯಾಪ್ತಿಯಲ್ಲಿ ಎಷ್ಟು ಬಂದರುಗಳು ಕಾರ್ಯನಿರ್ವಹಿಸುತ್ತಿವೆ; ಮತ್ತು ಅವುಗಳು ಏನು ಸಾಗಾಣಿಕ ಮಾಡುತ್ತಿವೆ; (ಮಾಹಿತಿ ನೀಡುವುದು) | ಕಾರವಾರ (ಉತ್ತರ ಕನ್ನಡ) ಜಿಲ್ಲೆಯ ವ್ಯಾಪ್ತಿಯಲ್ಲಿ 8 ಕಿರು ಬಂದರುಗಳಿವೆ. ಅವುಗಳ ಪೈಕಿ ಕಾರವಾರ ಬಂದರಿನ ಮೂಲಕ ಪ್ರಸ್ತುತ, High Speed Diesel (HSD), Palm oil, Rock Phosphate, Industrial Salt, Molasses, Bitumen, Fuel oil ಇತ್ಯಾದಿ ಸರಕುಗಳನ್ನು ಆಮದು/ರಫ್ತು ಮಾಡಲಾಗುತ್ತಿದೆ. ಉಳಿದ ಬಂದರುಗಳಲ್ಲಿ ಪ್ರಸ್ತುತ ಯಾವುದೇ ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿಲ್ಲ. |
| ಆ) | ಸಾಗರಮಾಲ ಯೋಜನೆಯಡಿಯಲ್ಲಿ ಕಾರವಾರ ಸಮುದ್ರ ದಂಡೆಯವರೆಗೆ ಎಷ್ಟು ಹೊಸ ಬಂದರುಗಳ ನಿರ್ಮಾಣ ಹಂತದಲ್ಲಿವೆ; ಯಾವ ಉದ್ದೇಶಕ್ಕಾಗಿ ನಿರ್ಮಾಣಗೊಳ್ಳುತ್ತಿವೆ; ಮತ್ತು ಅವುಗಳ ನಿರ್ಮಾಣಕ್ಕೆ ನಿಗದಿಯಾಗಿರುವ ವೆಚ್ಚವೆಷ್ಟು; (ವಿವರ ನೀಡುವುದು) | ಉತ್ತರ ಕನ್ನಡ ಜಿಲ್ಲೆಯ ಕಾರವಾರ ಸಮುದ್ರ ದಂಡೆಯಲ್ಲಿ ಕೇಂದ್ರ ಪುರಸ್ಕೃತ ಸಾಗರಮಾಲಾ ಯೋಜನೆ ಅಡಿಯಲ್ಲಿ ಯಾವುದೇ ಹೊಸ ಬಂದರುಗಳ ನಿರ್ಮಾಣ ಯೋಜನೆಗಳು ಇರುವುದಿಲ್ಲ. |
| ಇ) | ಹೊಸ ಬಂದರುಗಳ ನಿರ್ಮಾಣಕ್ಕೆ ಮೀನುಗಾರರು ಹಾಗೂ ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿರುವುದು ನಿಜವೇ; ಹಾಗಿದ್ದಲ್ಲಿ, ಸಂಪೂರ್ಣ ಮಾಹಿತಿ ನೀಡುವುದು ? | **ಕೇಣಿಯಲ್ಲಿ ಬಂದರು ಅಭಿವೃದ್ಧಿಯ ಸಂಪೂರ್ಣ ಮಾಹಿತಿ:**<br><br>ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಕೇಣಿಯಲ್ಲಿ 30 MTPA ಸಾಮರ್ಥ್ಯದ ಬಂದರನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ (PPP) ಮಾದರಿಯಲ್ಲಿ ಗ್ರೀನ್ ಫೀಲ್ಡ್ ಬಂದರನ್ನು ಅಭಿವೃದ್ಧಿ ಪಡಿಸಲು - ಸರ್ಕಾರದ ಆದೇಶ ಸಂಖ್ಯೆ ಐ.ಡಿ.ಡಿ 68 ಪಿಎಸ್.ಪಿ 2022(ಇ746686) **ದಿನಾಂಕ: 08.04.2022ರಲ್ಲಿ ಅನುಮತಿ ನೀಡಲಾಗಿದೆ.**<br><br>ಕೇಣಿ ಬಂದರಿನ ಬಂದರು ವ್ಯಾಪ್ತಿಯನ್ನು (Limits) ಇಂಡಿಯನ್ ಪೋರ್ಟ್ ಆಕ್ಟ್ 1908 ರ ಅಡಿಯಲ್ಲಿ ಸರ್ಕಾರವು **ದಿನಾಂಕ: 11.04.2022 ರಲ್ಲಿ ಘೋಷಿಸಲಾಗಿದೆ.** |

| | | |
|---|---|---|
| | | ಆಳ ಸಮುದ್ರ ಸರ್ವ ಋತು ಬಂದರನ್ನು ಸಾರ್ವಜನಿಕ ಖಾಸಗೀ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲು ಜಾಗತಿಕ ಟೆಂಡರ್‌ನ್ನು **ದಿನಾಂಕ: 12.09.2022 ರಂದು ಆಹ್ವಾನಿಸಲಾಗಿತ್ತು.**<br><br>ಮುಂದುವರೆದು ದಿನಾಂಕ: 07.03.2023ರಂದು ಎರಡನೇ ಬಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಅದರಂತೆ M/s JSW Infrastructure Limited ರವರು ಯಶಸ್ವಿ ಬಿಡ್ಡುದಾರರಾಗಿ ಹೊರಹೊಮ್ಮಿರುತ್ತಾರೆ.<br><br>ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಖಾಸಗೀ ಸಹಭಾಗಿತ್ವವದಲ್ಲಿ ಗ್ರೀನ್ ಫೀಲ್ಡ್ ಬಂದರು ಅಭಿವೃದ್ಧಿ ಪಡಿಸಲು **ದಿನಾಂಕ: 29.11.2023 ರಂದು ರಿಯಾಯಿತಿ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ.**<br><br>ಪ್ರಸ್ತುತ ಒಪ್ಪಂದಂತೆ ವಿಸ್ತೃತ ಯೋಜನಾ ವರದಿಯನ್ನು (DPR) ತಯಾರಿಸಲು M/s JSW Infrastructure Limited ರವರು ಸಮುದ್ರದಲ್ಲಿ ಭೂ ಸಾಂದ್ರತೆ ಮತ್ತು ಇತರೆ ಅಧ್ಯಯನಗಳು (Geotechnical Investigation) ಪ್ರಗತಿಯಲ್ಲಿದೆ.<br><br>ಈ ಬಗ್ಗೆ ಸ್ಥಳೀಯರು ವಿರೋಧ ವ್ಯಕ್ತ ಪಡಿಸಿರುತ್ತಾರೆ.<br><br>**ಹೊನ್ನಾವರದಲ್ಲಿ ಬಂದರು ಅಭಿವೃದ್ಧಿಯ ಸಂಪೂರ್ಣ ವಿವರ** :<br><br>ಕರ್ನಾಟಕ ರಾಜ್ಯ ಬಂದರುಗಳ ಸರಕು ಹೇರಿಳಿಸುವ ನಿಯಮಗಳು 2006ರನ್ವಯ ಕರಾವಳಿಯಲ್ಲಿ ಬಂದರು ಚಟುವಟಿಕೆಗಳನ್ನು ಉತ್ತೇಜಿಸಲು ಬಂದರು ವ್ಯಾಪ್ತಿಯ ಭುಮಿಯನ್ನು ಖಾಸಗೀ ಬಂಡವಾಳ ಹೂಡಿಕೆಗೆ ಗುತ್ತಿಗೆ ನೀಡಲು ಅವಕಾಶ ಕಲ್ಪಿಸಲಾಗಿದೆ.<br><br>ಈ ಹಿನ್ನೆಲೆಯಲ್ಲಿ M/s North Canara Sea Ports ರವರ ಪ್ರಸ್ತಾವನೆಯನ್ನು ಪರಿಗಣಿಸಿ ಕಾಸರಕೋಡು ಗ್ರಾಮದ ಸರ್ವೇ ನಂ: 305 ರಲ್ಲಿ 4.9 MTPA ಸಾಮರ್ಥ್ಯದ ಬಂದರು ಅಭಿವೃದ್ಧಿಗೆ ಸರ್ಕಾರದ ಆದೇಶ ಸಂಖ್ಯೆ: ಲೋಇ 119 ಪಿ.ಎಸ್.ಪಿ 2010, ದಿನಾಂಕ: 22.09.2010 ರಂತೆ **30** ವರ್ಷದ ಅವಧಿಗೆ ಗುತ್ತಿಗೆ ನೀಡಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ಪಿ.ಡಬ್ಲ್ಯೂ.ಡಿ 293 ಪಿ.ಎಸ್.ಪಿ 2010 ದಿನಾಂಕ: 07.04.2011 ರಲ್ಲಿ M/s North Canara Sea Ports ನ ಹೆಸರನ್ನು M/s Honnavar Port Pvt Ltd., (SPV) ಎಂದು ಬದಲಾಯಿಸಲು ಅನುಮೋದನೆ ನೀಡಲಾಗಿರುತ್ತದೆ. |

| | | |
|---|---|---|
| | | M/s Honnavar Port Pvt Ltd., ರವರು ಬಂದರು ಕಾಮಗಾರಿಯನ್ನು ಮಾನ್ಯ ನ್ಯಾಯಾಲಯದ ತಡಯಾಜ್ಞೆಯಿಂದಾಗಿ ಸ್ಥಗಿತಗೊಳಿಸಲಾಗಿತ್ತು, ದಿನಾಂಕ: 26.09.2023 ರಂದು ತಡೆಯಾಜ್ಞೆ ತೆರವಾದ ಹಿನ್ನೆಯಲ್ಲಿ ಕಾಮಗಾರಿಯನ್ನು ಪ್ರಾರಂಭಿಸಿರುತ್ತಾರೆ.<br><br>ಯೋಜನೆಯ ಅನುಷ್ಠಾನದ ಕುರಿತು ಸ್ಥಳೀಯರು ವಿರೋಧ ವ್ಯಕ್ತಪಡಿಸಿರುತ್ತಾರೆ. |

IDD 29 PSP 2025

**(ಮಂಕಾಳ ಎಸ್. ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು**